## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 783

ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ, (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು,

ಉತ್ತರಿಸಬೇಕಾದ ದಿನಾಂಕ : 25.09.2020

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯವನ್ನು ಸರ್ಕಾರ ಒದಗಿಸಿದೆ; (ತಾಲ್ಲೂಕುವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯವನ್ನು ಒದಗಿಸಿದ ಫಲಾನುಭವಿಗಳ ತಾಲ್ಲೂಕುವಾರು ವಿವರ ಕೆಳಕಂಡಂತಿದೆ. (ಕೋಷ್ಟಕ ಕೆಳಗೆ) 2019-20ನೇ ಸಾಲಿನ ಬಾಂಡುಗಳು ಮುದ್ರಣದ ಹಂತದಲ್ಲಿದ್ದು, ಅವುಗಳು ಸ್ವೀಕೃತವಾದ ನಂತರ ಫಲಾನುಭವಿಗಳಿಗೆ ವಿತರಿಸಲಾಗುವುದು. |
| ಆ | ಯೋಜನೆಯ ಫಲಾಭವಿಗಳನ್ನು ಗುರುತಿಸಲು ನಿಗಧಿಪಡಿಸಿರುವ ನಿಯಮಗಳಲ್ಲಿ ಬದಲಾವಣೆ ಮಾಡಲಾಗಿದೆಯೇ; (ವಿವರ ನೀಡುವುದು) | ಭಾಗ್ಯಲಕ್ಷ್ಮಿ ಯೋಜನೆಯಡಿ ದಿನಾಂಕ:24-02-2018ರ ಸರ್ಕಾರದ ಆದೇಶದಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ತರಲಾಗಿದೆ.<br>1. ಭಾಗ್ಯಲಕ್ಷ್ಮಿ ಯೋಜನೆಯ ಸೌಲಭ್ಯವನ್ನು ಪಡೆಯಲು ನೊಂದಣಿ ಮಾಡಲು ಮಗು ಜನಿಸಿದ ಒಂದು ವರ್ಷದೊಳಗೆ ಇರುವ ಅವಧಿಯನ್ನು ಮಗು ಜನಿಸಿದ ಎರಡು ವರ್ಷದವರೆಗೆ ವಿಸ್ತರಿಸಲಾಗಿದೆ.<br>2. ಎರಡನೇ ಮಗುವನ್ನು ಯೋಜನೆಯಡಿ ನೊಂದಣಿ ಮಾಡುವ ಸಂದರ್ಭದಲ್ಲಿ ಕಡ್ಡಾಯ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಗೆ ಒಳಪಡಬೇಕೆಂಬ ಷರತ್ತನ್ನು ಕೈ ಬಿಡಲಾಗಿದೆ. |
| ಇ | ಭಾಗ್ಯಲಕ್ಷ್ಮಿ ಯೋಜನೆ ಜಾರಿಗಾಗಿ ಮೂರು ವರ್ಷಗಳಲ್ಲಿ ಮೀಸಲಿಟ್ಟ ಮತ್ತು ವೆಚ್ಚ ಮಾಡಿದ ಮೊತ್ತ ಎಷ್ಟು; (ಮಾಹಿತಿ ನೀಡುವುದು) | ಭಾಗ್ಯಲಕ್ಷ್ಮಿ ಯೋಜನೆ ಜಾರಿಗಾಗಿ ಮೂರು ವರ್ಷಗಳಲ್ಲಿ ಮೀಸಲಿಟ್ಟ ಮತ್ತು ವೆಚ್ಚ ಮಾಡಿದ ಮೊತ್ತದ ವಿವರ ಈ ಕೆಳಕಂಡಂತಿದೆ. (ಕೋಷ್ಟಕ ಕೆಳಗೆ) |

| ತಾಲ್ಲೂಕುಗಳ ಹೆಸರು | ವಿತರಿಸಲಾಗಿರುವ ಬಾಂಡ್ ಸಂಖ್ಯೆ | | |
|---|---|---|---|
| | 2016-17 | 2017-18 | 2018-19 |
| ಬಸವಕಲ್ಯಾಣ | 1309 | 503 | 1508 |
| ಭಾಲ್ಕಿ | 1306 | 856 | 1896 |
| ಬೀದರ್ | 1700 | 1082 | 2585 |
| ಹುಮನಾಬಾದ್ | 1159 | 371 | 1414 |
| ಸಂತಪೂರ (ಔ) | 992 | 450 | 1377 |

(ರೂ. ಕೋಟಿಗಳಲ್ಲಿ)

| ವರ್ಷ | ಮೀಸಲಿಟ್ಟ ಅನುದಾನ | ವೆಚ್ಚವಾದ ಅನುದಾನ |
|---|---|---|
| 2017-18 | 321.28 | 301.93 |
| 2018-19 | 309.43 | 294.43 |
| 2019-20 | 309.42 | 294.42 |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 99 ಮಮಲ 2020